ಸಂಪಕ್ಕಜ್ಜಿಯ ಮಾಳಿಗೆ ಮನೆಯನ್ನು ಮಹಡಿಯ ಮನೆ ನುಂಗಾಕಿಕೊಂಡಿತ್ತು. ಪಕ್ಕಕ್ಕೊಂದು ವಪ್ಪಾರೂ ಬಂದಿತ್ತು. ಇದ್ದ ತೋಟಕ್ಕೆ ಮತ್ತೊಂದೆರಡು ಎಕರೆಯೂ ಸೇರಿಕೊಂಡಿತ್ತು. ಅಷ್ಟನ್ನೂ ಸುತ್ತ ಬೇಲಿಯೊಂದು ಸುತ್ತುವರೆದಿತ್ತು. ತೋಟದ ಬದುವೊಂದರಲ್ಲಿ ಹಾಕಿಸಿದ್ದ ಬೋರ್ವೆಲ್‌ನಿಂದ ತೋಟಕ್ಕಾಗಿ ಮಿಗುವಷ್ಟು ನೀರು ಸಿಕ್ಕಿತ್ತು. ಆಗಾಗ ಬಂದೋಗುತ್ತಿದ್ದ ಸುತರಾಂ ಕನ್ನಡ ಬಾರದ ಬಾಲ್ರಾಜನ ಹೆಂಡತಿ ಮಕ್ಕಳ ಬಗ್ಗೆ ಊರೊಳಗೆ ತಲಾತಟ್ಟಿಗೆ ಮಾತುಗಳುಟ್ಟಿಕೊಂಡಿದ್ದವು. ತಮಗೆ ತೋಚಿದ ಜಾತಿ, ಧರ್ಮಗಳನ್ನು ಅವರಿಗೆ ತಾಳೆ ಹಾಕಿನೋಡಿದ್ದರು. ಆದರೂ ಬಾಲ್ರಾಜನ ಕಾರು, ಅವನ ಹೆಂಡತಿ ಮಕ್ಕಳು ಮೈ ತುಂಬಾ ಹಾಕಿಕೊಂಡಿದ್ದ ಬಂಗಾರ, ನಾಜೂಕಿನ ದಿರಿಸುಗಳನ್ನು ನೋಡಿ ತಂತಮ್ಮ ಮಾತುಗಳನ್ನು ಹಂಗಂಗೇ ನುಂಗಿಕೊಂಡಿದ್ದರು. ಮೂರು ತಿಂಗಳಿಗೋ ಆರು ತಿಂಗಳಿಗೋ ಊರಿಗೆ ಕುಟುಂಬ ಸಮೇತ ಬರುತ್ತಿದ್ದ ಬಾಲ್ರಾಜ ವಾರಗಟ್ಟಲೆ ಇದ್ದು ಹೋಗುತ್ತಿದ್ದ. ಈ ನಡುವೆ ಒಂದೆರಡು ಸಾರ್ತಿ ಸಂಪಕ್ಕಜ್ಜಿಯನ್ನು ತಾನಿದ್ದಲ್ಲಿಗೆ ಕರೆದೊಯ್ದಿದ್ದ. ಅಲ್ಲಿನ ಆ ಬಂಗಲೆ, ಆಳು ಕಾಳುಗಳನ್ನು ನೋಡಿ ಸಂಪಕ್ಕಜ್ಜಿಯ ಮುದಿ ಜೀವ ಉಬ್ಬಿಹೋಗಿತ್ತು. ಆದರೂ ಮೇರಿ, ರೀಟಾ, ಫೆಲಿಕ್ಸ್ ಅನ್ನುವ ಹೆಸರುಗಳು ವಿಚಿತ್ರವಾಗಿ ಕಾಣುತ್ತಾ ಅವುಗಳನ್ನು ತನ್ನ ನಾಲಿಗೆಗೆ ಒಗ್ಗಿಸಿಕೊಳ್ಳಲು ಯತ್ನಿಸುತ್ತಲೇ ಸೊಸೆ, ಮೊಮ್ಮಕ್ಕಳೊಂದಿಗಿನ ಒಡನಾಟವನ್ನು ಸಹ್ಯವಾಗಿಸಿಕೊಂಡಿದ್ದಳು. ಒಬ್ಬಳೇ ಯಾಕೆ ಇರ್ತೀಯಾ ಬಂದು ಬಿಡು ಅಂತ ಬಾಲ್ರಾಜ ಅಂದಾಗಲೆಲ್ಲಾ ಸಂಪಕ್ಕಜ್ಜಿಗೆ ಸತ್ತು ಸಂಪಿಗೆ ಮರವಾಗಿರುವ ಗಂಡ ಪಲಾರ್ದಯ್ಯ ಹಾಗೂ ಮಗಳು ರುಕುಮ ನೆನಪಿಗೆ ಬಂದು, 'ಅದೆಂಗಲಾ ಮಗಾ, ಅವುರ್ನೆಲ್ಲಾ ಇಲ್ಲೇ ಬಿಟ್ಟು ಅಲ್ಲಿಗೆ ಬರಾದು,' ಅಂತ ಕಣ್ಣೀರಾಗಿಬಿಡುತ್ತಿದ್ದಳು. ಹಂಗಾಗಿ, ಬಾಲ್ರಾಜ ಅವ್ವನನ್ನು ಒತ್ತಾಯಿಸಲಾಗದೆ ಸುಮ್ಮಾಗಿಬಿಡುತ್ತಿದ್ದ.

## 2

ಹಿಂಗೆ ಸಂಪಕ್ಕಜ್ಜಿಯ ಬಿದ್ದೋಗಿದ್ದ ಬದುಕಿನ ಬಂಡಿ ಎದ್ದು ಕೂತಿರುವಂಥಾ ಹೊತ್ತಲ್ಲಿ ಅದಕ್ಕೆ ಇದ್ದಕ್ಕಿದ್ದಂತೆ ಅಟಕಾಯಿಸಿಕೊಂಡಿದ್ದ ವಿಘ್ನದ ಮುನ್ಸೂಚನೆ ಸಂಪಕ್ಕಜ್ಜಿಯನ್ನು ಹೈರಾಣಾಗಿಸತೊಡಗಿತ್ತು. ಧೂಳ್ಸಂಜೆಯ ಒಂದಿನ, ತೋಟದಿಂದ ಅದೇ ತಾನೇ ಬಂದಿದ್ದ ಸಂಪಕ್ಕಜ್ಜಿ ಉಸ್ಸಪ್ಪಾ ಅಂತ ಕೂತು ದಣಿವಾರಿಸಿಕೊಳ್ಳುತ್ತಿದ್ದಳು. ಆ ಹೊತ್ತಲ್ಲಿ ಅಲ್ಲಿಗೆ ಬಂದಿದ್ದ ಪಂಚ್ಲಿಂಗಪ್ಪ, 'ಊರಾಗೆ ಇತ್ತಿತ್ಲಾಗೆ ನಿನ್ ಮಗುನ್ ಬಗ್ಗೆ ಏನೇನೋ ಮಾತಾಡ್ಕೆಣ್ತಾ ಅವ್ರೆ, ಅದೇನೋ ಮತಾಂತ್ರ ಮಾಡ್ತಾವ್ನೆ ಅಂತ ಪುಕಾರೆಬ್ರುಸ್ತಾವ್ರೆ, ಇದುನ್ನ ಇಂಗೇ ಬುಟ್ರೆ ಊರೇ ಎಕ್ಕುಟ್ಟೋಗುತ್ತೆ ಅಂತ ಅದ್ಕಾಗೇ ಅದೆಲ್ಲಿಂದಲೋ ಒಂದಷ್ಟು ಜನ ಬಂದು ಊರೊಳ್ಗೆಲ್ಲಾ ಮೀಟಿಂಗ್ ಮಾಡ್ತಾವ್ರಂತೆ, ಎಂಗಾರಾ ಆಗ್ಲಿ ಅವುನ್ನ ಒಂದಷ್ಟ್ ದಿಸ ಇತ್ಲಾಗಿ ಬಂದ್ಗಿಂದೀಯಾ ಅಂತ ಹೇಳು,' ಅಂತ ಒಂದೇ ಉಸುರಿಗೆ ಹೇಳಿದ್ದ. ಪಂಚ್ಲಿಂಗಪ್ಪನ ಮಾತುಗಳ ತಲೆಬುಡ ತಿಳಿಯದೇ ಹೋಗಿದ್ದ ಸಂಪಕಜ್ಜಿ, 'ಅದ್ಯಾಕ್ ಪಂಚಣ್ಣ ನಮ್ಮುಡ್ಗ ಅಂತಾದ್ ಏನ್ ಮಾಡವ್ನೆ, ಒಬ್ರು ತಂಟ್ಗೆ ವೋದಾನಲ್ಲ, ತಾನಾತು ತನ್ನ ಪಾಡಾತು ಅಂತ ಇದಾನೆ, ಅದ್ಕೆ ಇದ್ಕೆ ಅಂತ ಊರ್ಗಾಗಿ ಅವ್ನೇ ಸವ್ಕಂತಾವ್ನೆ ಅಂಥಾದ್ರಾಗೆ...' ಅಂದಿದ್ದಳು ಭಯ ತುಂಬಿದ ದನಿಯಲ್ಲಿ. 'ಅದೆಲ್ಲಾ ನಿಂಗೆ ತಿಳೀವಲ್ದು, ಒಂದು ಹೋಗಿ ಇನ್ನೊಂದ್ ಆದಾತು. ನಾನು ಹೇಳ್ದೆ ಅಂತ ಇವತ್ತೇ ಹೇಳು ಫೋನ್ ಮಾಡಿ. ಇಲ್ಲಾಂದ್ರೆ ತತಾಯಿಲ್ಲಿ ನಂಬರ್ನ ನಾನೇ ಹೇಳ್ತೀನಿ,' ಅನ್ನುತ್ತಾ ಪಂಚ್ಲಿಂಗಪ್ಪ ಅಜ್ಜಿ ನೋಟ್‌ಬುಕ್ಕೊಂದರಲ್ಲಿ ಬರೆಸಿಟ್ಟಿದ್ದ ಬಾಲ್ರಾಜನ ನಂಬರ್ರನ್ನು ಗುರುತಾಕಿಕೊಂಡು ಹೋಗಿದ್ದ.

ಅದಾವುದೋ ಗಳಿಗೆಯಲ್ಲಿ ಬಾಲ್ರಾಜ ತೋರಿದ್ದ ಹುಮ್ಮಸ್ಸು ಇಂಥದ್ದೊಂದು ತಲೆ ಬಿಸಿಯನ್ನು ಹುಟ್ಟಾಕಿತ್ತು. ಬಾಲ್ರಾಜ ಕೆಲ ತಿಂಗಳ ಹಿಂದೆ ಊರಿಗೆ ಬಂದಾಗ ತನ್ನ ಜೊತೆಗೊಬ್ಬ ಗೆಳೆಯನನ್ನೂ